**ಸಿ.ಸಿ. ನಂ. 8861/2015 ಪ್ರಾ.ಸಃ 3 ಚಾ.ಸಃ 4**

**ದಿನಾಂಕಃ 13/09/2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

<u>ಪಾಟೀ ಸವಾಲುಃ ಶ್ರೀ **SNR** ಆರೋಪಿ ಪರ ವಕೀಲರಿಂದಃ</u>

ನನ್ನ ಸ್ವಂತ ಊರು ಯಲ್ಲಯ್ಯನ ಪಾಳ್ಯ. ಚಾಸಾ.1 ರವರ ತಂದೆ ಸುಮಾರು 20 ವರ್ಷಗಳಿಂದ ಪರಿಚಯ ಇದ್ದಾರೆ. ಅವರು ನನ್ನ ಸಂಬಂಧಿಕರು. ನಾನು ಅವರು ಚಿಕ್ಕಪ್ಪ-ದೊಡ್ಡಪ್ಪ ನ ಮಕ್ಕಳು. ನನಗೆ ಪೊಲೀಸ್ ಠಾಣೆಗೆ ಹೋಗುವ ಅಭ್ಯಾಸ ಇಲ್ಲ. ಸಾಮಾನ್ಯವಾಗಿ ನಾನು ಪೊಲೀಸ್ ಠಾಣೆಗಳಿಗೆ ಹೋಗಿ ಹೇಳಿಕೆಗಳನ್ನು ನೀಡಿರುವುದಿಲ್ಲ. ಚಾಸಾ.1 ರವರಿಗೆ ಮದುವೆ ನಿಶ್ಚಯವಾದ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಮದುವೆ ನಿಶ್ತಿತಾರ್ಥ ಆಗಿರಲಿಲ್ಲ ಎಂದರೆ ಸರಿಯಲ್ಲ. ಮದುವೆಯ ನಿಶ್ಚಿತಾರ್ಥ ಕಾರ್ಯದಲ್ಲಿ ನಾನು ಹರಿಸಿಂಗ್ ಗೋವಿಂದಪ್ಪ ಮತ್ತು ಯಾರುಾ ಇರಲಿಲ್ಲ ಎಂದರೆ ಸರಿ. ಚಾಸಾ.1 ರವರ ತಂದೆ ಆರ್ಥಿಕವಾಗಿ ಬಲಾಢ್ಯರಲ್ಲ ಎಂದರೆ ಸರಿ. ಚಾಸಾ.1 ಮತ್ತು ಒಂದನೇ ಆರೋಪಿ ವಿದ್ಯಾವಂತರು ಎಂದರೆ ಸರಿ. ಮದುವೆ ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಪೋಟೋಗಳನ್ನು ತೆಗೆದಿದ್ದಾರೆ. ನಿಶ್ಚಿತಾರ್ಥದ ಭಾವಚಿತ್ರಗಳನ್ನು ನೋಡುತ್ತಿದ್ದು ಅದರಲ್ಲಿ ನಾನು ಕಾಣುತ್ತಿಲ್ಲ ಎಂದರೆ ಸರಿ. ನಾನು ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಹಾಜರಿದ್ದ ಬಗ್ಗೆ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನಿಶ್ಚಿತಾರ್ಥ ಕಾರ್ಯಕ್ರಮ ಚಾಸಾ.1 ರವರ ತಂದೆ ಮನೆಯಲ್ಲಿ ಆಗಿರುತ್ತದೆ. ನಿಶ್ಚಿತಾರ್ಥ ಕಾರ್ಯಕ್ರಮ ಮಧ್ಯಾಹ್ನ 01 ರಿಂದ 02 ಗಂಟೆಯ ಸಮಯದಲ್ಲಿ ಆಗಿರುತ್ತದೆ. ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಹಾರ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಮೂರು ಲಕ್ಷ ಹಣವನ್ನು ಆರೋಪಿತರಿಗೆ ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ಚಾಸಾ.1 ರವರ ತಂದೆ ಬಡವರಾಗಿದ್ದ ಕಾರಣಕ್ಕೆ ಆರೋಪಿತನೇ ತಮ್ಮ ಸ್ವಂತ ಖರ್ಚಿನಿಂದ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎರಡನೇ ಆರೋಪಿ ಮದುವೆ ಖರ್ಚಿಗಾಗಿ 50 ಸಾವಿರ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ತಂದೆ ಒಡವೆಗಳನ್ನು ಖರೀದಿ ಮಾಡಿದ ಬಗ್ಗೆ ರಶೀದಿಗಳನ್ನು ನನಗೆ ತೋರಿಸಿರುವುದಿಲ್ಲ. ಆ ರೀತಿ ಯಾವುದೇ ಒಡವೆಗಳು ಖರೀದಿ ಮಾಡಿಲ್ಲ ಆ ಕಾರಣಕ್ಕೆ ರಶೀದಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ.1 ರವರ ಜೊತೆ ಗಲಾಟೆ ಮಾಡಿದ ಬಗ್ಗೆ ಆಕೆಯ ತಂದೆ ನನಗೆ ತಿಳಿಸಿರುತರ್ತಾರೆ. ಆದರೆ ಆ ಬಗ್ಗೆ ದಿನಾಂಕ ನನಗೆ ನೆನಪಿಲ್ಲ. ಆ ರೀತಿ ಯಾವುದೇ ಗಲಾಟೆ ಆಗದಿರುವ ಕಾರಣಕ್ಕೆ ನನಗೆ ದಿನಾಂಕ ನೆನಪಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವ ದಿನಾಂಕದಂದು ಚಾಸಾ.1 ರವರಿಗೆ ಹಲ್ಲೆ ಮಾಡಿದರೆಂದು ನನಗೆ ಗೊತ್ತಿಲ್ಲ. ಚಾಸಾ.1 ಮತ್ತು ಆರೋಪಿ ವಾಸವಿದ್ದ ವಿಳಾಸ ನನಗೆ ಗೊತ್ತಿಲ್ಲ. ಜಯನಗರ 4 ನೇ ಬ್ಲಾಕ್ ನಲ್ಲಿ ಎರಡು ಲಕ್ಷ ಹಣ ನೀಡಿ

ಆರೋಪಿತರಿಗೆ ಮನೆ ಮಾಡಿಕೊಟ್ಟಿದ್ದರು. ಆ ರೀತಿ ಮನೆ ಬೋಗ್ಯ ಹಾಕಿಕೊಟ್ಟಿದ್ದ ಬಗ್ಗೆ ಬೋಗ್ಯ ಪತ್ರ ವನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳಿರುತ್ತಾರೆ.ಈ ಹಂತದಲ್ಲಿ ಸದರಿ ದಾಖಲೆಯನ್ನು ಆರೋಪಿ ಪರವಾಗಿ ವಕೀಲರು ಕೋರಿಕೆ ಸಲ್ಲಿಸಿದ್ದು ಸದರಿ ದಾಖಲೆಯಲ್ಲಿ ಸಾಕ್ಷಿದಾರರು ಪಕ್ಷಗಾರ ರಲ್ಲದ ಕಾರಣ ವಕೀಲರ ಕೋರಿಕೆಯನ್ನು ನಿರಾಕರಿಸಲಾಯಿತು. ಚಾಸಾ.1 ರವರ ತಂದೆ ಯಾವುದೇ ಬೋಗ್ಯದ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎರಡು ಲಕ್ಷ ಹಣವನ್ನು ನಗದು ರೂಪದಲ್ಲಿ ನೀಡಿರುತ್ತಾರೆ. ಎಷ್ಟು ರೂ. ಮುಖ ಬೆಲೆಯ ನೋಟುಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ತಪ್ಪು ಎಂದು ನನಗೆ ಗೊತ್ತು ಆದರೆ ಆಗ ಅದು ನಡೆಯುತ್ತಿತ್ತು. ಆ ದಿನ ವರದಕ್ಷಿಣೆ ಕೇಳಿದ ಬಗ್ಗೆ ನಾನುಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಅಲ್ಲಿ ಯಾವುದೇ ವರದಕ್ಷಿಣೆ ವಿಚಾರ ಬಂದಿಲ್ಲ ಆ ಕಾರಣ ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ನಿಜ. ಒಂದನೇ ಆರೋಪಿತನು ವಿದ್ಯಾವಂತನಾಗಿದ್ದ ಕಾರಣಕ್ಕೆ ವರದಕ್ಷಿಣೆ ತೆಗೆದುಕೊಳ್ಳಬಾರದು ಎಂದು ತೀರ್ಮಾನ ಮಾಡಿದ್ದ ಎಂದರೆ ಸರಿಯಲ್ಲ. ಆರೋಪಿತರನ್ನು ನಿಶ್ಚಿತಾರ್ಥದ ಕಾರ್ಯಕ್ರಮದಲ್ಲಿ ನೋಡಿರುತ್ತೇನೆ. ಚಾಸಾ.1 ಆರೋಪಿತರ ವಿರುದ್ಧ ಮತ್ತೊಂದು ಪ್ರಕರಣ ಸಿಮಿಸ್ ನಂ. 149/2014 ರಂತೆ 5 ನೇ ಎಸಿಎಂಎಂ ನ್ಯಾಯಲಯದಲ್ಲಿ ದಾಖಲು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಪಾಟೀ ಸವಾಲು ಮಾಡಲು ಆರೋಪಿ ಪರ ವಕೀಲರು ಕಾಲವಕಾಶ ಕೇಳಿದ್ದರ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ